## ನಿಮ್ಮೊಡನೆ

# ಹಸಿವು ನೀಗಿಸಿ

ವಿಶ್ವದ ಅತಿ ದೊಡ್ಡ ಆರ್ಥಿಕ ಶಕ್ತಿಗಳಲ್ಲೊಂದು ಎಂದು ಬೀಗುವ ಭಾರತದ ಮತ್ತೊಂದು ಮುಖವನ್ನು 2016ರ 'ಜಾಗತಿಕ ಹಸಿವಿನ ಸೂಚ್ಯಂಕ' ಅನಾವರಣಗೊಳಿಸಿದೆ. 'ಅಂತರರಾಷ್ಟ್ರೀಯ ಆಹಾರನೀತಿ ಸಂಶೋಧನಾ ಸಂಸ್ಥೆ' ಬಿಡುಗಡೆ ಮಾಡಿರುವ ಈ ಸೂಚಿಯ ಪಟ್ಟಿಯಲ್ಲಿರುವ 118 ದೇಶಗಳಲ್ಲಿ ಭಾರತಕ್ಕೆ 97ನೇ ಸ್ಥಾನ. ಪ್ರತಿರಾತ್ರಿ ಕೋಟ್ಯಂತರ ಭಾರತೀಯರು ಬರಿಹೊಟ್ಟೆಯಲ್ಲಿ ಮಲಗುತ್ತಿದ್ದಾರೆ ಎನ್ನುವ ಸಂಗತಿ ನಮ್ಮೆಲ್ಲ ಅಭಿವೃದ್ಧಿ ಮಾದರಿಗಳನ್ನು ಅಣಕಿಸುವುದರ ಜೊತೆಗೆ, ವಿಶ್ವದೆದುರು ನಮ್ಮ ಬಡತನವನ್ನು ಜಾಹೀರುಪಡಿಸಿದಂತಾಗಿದೆ.

ಆರ್ಥಿಕ ಹಾಗೂ ಯುವಶಕ್ತಿಯ ಹಿನ್ನೆಲೆಯಲ್ಲಿ ಭಾರತವನ್ನು ಬಲಿಷ್ಠ ದೇಶವೆಂದು ಬಿಂಬಿಸುವ ಪ್ರಯತ್ನಗಳು ಈಚಿನ ದಿನಗಳಲ್ಲಿ ಹೆಚ್ಚಾಗಿವೆ. ಇಂಥ ಬಣ್ಣನೆಗಳ ಪೊಳ್ಳುತನವನ್ನು ಬಯಲು ಮಾಡುವಂತೆ ಭಾರತದಲ್ಲಿ ಹಸಿವೆ ನೆಲೆಸಿರುವುದನ್ನು 'ಜಾಗತಿಕ ಹಸಿವಿನ ಸೂಚ್ಯಂಕ' ವರದಿ ಮಾಡಿದೆ. ಈ ವರದಿಯ ವಿವರಗಳು ದಿಗಿಲು ಹುಟ್ಟಿಸುವಂತಿವೆ. ನೆರೆಯ ದೇಶಗಳಾದ ಚೀನಾ, ಶ್ರೀಲಂಕಾ, ಮ್ಯಾನ್ಮಾರ್‌ಗಳಿಗಿಂತಲೂ ಭಾರತ ಕಳಪೆ ಸ್ಥಾನದಲ್ಲಿದೆ. ಆಫ್ಘಾನಿಸ್ತಾನ ಹಾಗೂ ಪಾಕಿಸ್ತಾನಗಳಷ್ಟೇ ಭಾರತಕ್ಕಿಂತಲೂ ಕೆಳಗಿರುವ ಏಷ್ಯನ್ ದೇಶಗಳು. ಪ್ರತಿ ಏಳು ಮಂದಿ ಭಾರತೀಯರಲ್ಲಿ ಒಬ್ಬ ಹಸಿವಿನಿಂದ ಬಳಲುತ್ತಿದ್ದು, 2030ರ ವೇಳೆಗೆ ದೇಶದಲ್ಲಿನ ಹಸಿವಿನ ಸಮಸ್ಯೆ ಮತ್ತಷ್ಟು ಉಲ್ಬಣಿಸಲಿದೆ.

ಶಿಶುಮರಣ ಸಂಖ್ಯೆ, ಅಪೌಷ್ಟಿಕತೆ, ಕಡಿಮೆ ತೂಕ ಹಾಗೂ ಬೆಳವಣಿಗೆ ಕುಂಠಿತ ಮಕ್ಕಳನ್ನು ಹಸಿವಿನ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಪರಿಗಣಿಸಲಾಗಿದೆ. 18 ಕೋಟಿಗೂ ಹೆಚ್ಚು ಭಾರತೀಯರು ಹಸಿವಿನ ದವಡೆಗೆ ಸಿಲುಕಿದ್ದರೆ, ನೂರರಲ್ಲಿ ಹದಿನೈದು ಮಂದಿ ಪೌಷ್ಟಿಕ ಆಹಾರದಿಂದ ವಂಚಿತರಾಗಿದ್ದಾರೆ. ಜನಸಂಖ್ಯಾ ಸ್ಫೋಟ ಈಗಿರುವಂತೆಯೇ ಮುಂದುವರಿದಲ್ಲಿ ಅನ್ನದ ಸಮಸ್ಯೆ ಮತ್ತಷ್ಟು ವಿಷಮಿಸಲಿದೆ ಎಂದು ವರದಿ ಎಚ್ಚರಿಸಿದೆ. 2020ರೊಳಗೆ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ಕೇಂದ್ರ ಸರ್ಕಾರದ ಪ್ರಯತ್ನಕ್ಕೆ ಆಹಾರದ ಸಮಸ್ಯೆ ತೊಡಕಾಗಿ ಪರಿಣಮಿಸಲಿದೆ ಎಂದು ಹೇಳಲಾಗಿದೆ.

ಹಸಿವಿನ ಸಮಸ್ಯೆಯ ಹಿನ್ನೆಲೆಯಲ್ಲಿ ದೇಶದಲ್ಲಿ ಆಹಾರದ ಕೊರತೆ ಇದೆ ಎಂದು ಭಾವಿಸಬೇಕಿಲ್ಲ. ಎಲ್ಲ ಭಾರತೀಯರಿಗೂ ಸಾಕಾಗುವಷ್ಟು ಆಹಾರಧಾನ್ಯಗಳನ್ನು ನಮ್ಮಲ್ಲಿ ಬೆಳೆಯಲಾಗುತ್ತಿದೆ. ಸಮಸ್ಯೆ ಇರುವುದು ಅವುಗಳನ್ನು ತಲುಪಿಸುವ ವ್ಯವಸ್ಥೆಯಲ್ಲಿ. ಜನರ ಅನ್ನ–ಹಸಿವಿನಲ್ಲೂ ಲಾಭ ಮಾಡಿಕೊಳ್ಳುವ ಭ್ರಷ್ಟರಿಂದಾಗಿ ಈ ಅವ್ಯವಸ್ಥೆ ತಲೆದೋರಿದೆ. ಎಲ್ಲ ನಾಗರಿಕರಿಗೂ ಕನಿಷ್ಠ ಆಹಾರ ಹಾಗೂ ಪೌಷ್ಟಿಕಾಂಶಗಳನ್ನು ಒದಗಿಸುವ ಉದ್ದೇಶದಿಂದ 2013ರಲ್ಲಿ ಅನುಷ್ಠಾನಗೊಂಡ 'ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ'ಯ ಮೂಲ ಆಶಯವೇ ವಿಫಲವಾಗಿದೆ. ಸರ್ಕಾರದ ವಿವಿಧ ಇಲಾಖೆಗಳ ನಡುವಣ ಹೊಂದಾಣಿಕೆಯ ಕೊರತೆ ಫಲಾನುಭವಿಗಳಿಗೆ ದವಸ–ಧಾನ್ಯಗಳು ಸರಿಯಾಗಿ ತಲುಪಲು ಅಡ್ಡಿಯಾಗಿದೆ. ಶಾಲಾಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಮಕ್ಕಳು ಹಾಗೂ ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕ ಆಹಾರ ನೀಡುವ ಯೋಜನೆಗಳು ವಿವಿಧ ರಾಜ್ಯಗಳಲ್ಲಿ ಜಾರಿಯಲ್ಲಿವೆ. ಆದರೆ, ಎಷ್ಟೋ ಮಕ್ಕಳು ಶಿಕ್ಷಣದ ಹಕ್ಕಿನಿಂದ ವಂಚಿತರಾಗಿ ಬಯಲಿನಲ್ಲೇ ಉಳಿದಿರುವಾಗ, ಅವರಿಗೆ ಈ ಯೋಜನೆಗಳು ತಲುಪುವುದಾದರೂ ಹೇಗೆ? ಮಕ್ಕಳ ಅಪೌಷ್ಟಿಕತೆ ಹಾಗೂ ಕುಂಠಿತ ಬೆಳವಣಿಗೆ ರೀತಿಯ ಸಮಸ್ಯೆಗಳಿಗೂ ಶಿಕ್ಷಣ ಕ್ಷೇತ್ರದ ವೈಫಲ್ಯ, ನೈರ್ಮಲ್ಯದ ಕೊರತೆ ಹಾಗೂ ಮಾಲಿನ್ಯ ಹೆಚ್ಚಳದಂತಹ ಸಂಗತಿಗಳಿಗೂ ಸೂಕ್ಷ್ಮ ಸಂಬಂಧ ಇರುವುದನ್ನು ಗಮನಿಸಬೇಕು. ಕರ್ನಾಟಕದಲ್ಲಿ 'ಬಿಪಿಎಲ್' ಕುಟುಂಬಗಳಿಗೆ ಉಚಿತವಾಗಿ ಆಹಾರಧಾನ್ಯ ನೀಡುವ 'ಅನ್ನಭಾಗ್ಯ' ಯೋಜನೆ ಜಾರಿಯಲ್ಲಿದೆ. ಆದರೆ, ಈ ಯೋಜನೆಗಳೆಲ್ಲ ಪರಿಣಾಮಕಾರಿಯಾಗಿ ಜಾರಿಯಾಗದೆ ಹಸಿವಿನ ಸಮಸ್ಯೆ ಉಲ್ಬಣಿಸುತ್ತಲೇ ಇದೆ.

ವಿಶ್ವದ ಮೂರನೇ ಆರ್ಥಿಕ ಶಕ್ತಿ ಎಂದು ಬೀಗುವ ಭಾರತದಲ್ಲಿ ಬಡವರು ಹೇಗೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾರೆ ಎನ್ನುವುದಕ್ಕೆ 'ಹಸಿವಿನ ಸೂಚ್ಯಂಕ' ಒಂದು ಉದಾಹರಣೆ. ಭ್ರಷ್ಟಾಚಾರ ಹಾಗೂ ಯೋಜನೆಗಳ ನಿರ್ವಹಣೆಯ ಅಸಮರ್ಪಕತೆ ಆಹಾರ ಪೂರೈಕೆ ವ್ಯವಸ್ಥೆ ಹಳಿತಪ್ಪಲು ಪ್ರಮುಖ ಕಾರಣಗಳು. 'ಅನ್ನಭಾಗ್ಯ'ದಂತಹ ಯೋಜನೆಗಳು ಜನರನ್ನು ಸೋಮಾರಿಗಳನ್ನಾಗಿಸುತ್ತವೆ ಎನ್ನುವ ಟೀಕೆಗಳನ್ನು ಗಮನಿಸಿದರೆ, ನಮ್ಮ ನಡುವೆಯೇ ಇರುವ ಜನರ ಬಡತನದ ಬಿಸಿ ಸಮಾಜದ ಮುಖ್ಯವಾಹಿನಿಗೆ ತಾಕುತ್ತಿಲ್ಲ ಎನ್ನುವುದು ಆತಂಕ ಹುಟ್ಟಿಸುವಂತಿದೆ. ಅಭಿವೃದ್ಧಿಯ ನಿಜವಾದ ಸೂಚ್ಯಂಕಗಳು ಸಮಾಜದ ಕಟ್ಟಕಡೆಯ ವ್ಯಕ್ತಿಯ ಮುಖದಲ್ಲಿ ಪ್ರತಿಫಲಿಸಬೇಕೆ ಹೊರತು ಪೇಟೆಯ ಅಂಕಿಅಂಶಗಳಲ್ಲಲ್ಲ. ಅಭಿವೃದ್ಧಿ ಮಂತ್ರವನ್ನು ಜಪಿಸುತ್ತಿರುವ ಸರ್ಕಾರ, ದೇಶದ ಎಲ್ಲ ನಾಗರಿಕರಿಗೂ ಆಹಾರ ತಲುಪಿಸುವುದನ್ನು ಆದ್ಯತೆಯ ಸಂಗತಿಯಾಗಿ ಪರಿಗಣಿಸಬೇಕು. ಈ ನಿಟ್ಟಿನಲ್ಲಿ ಯೋಜನೆಗಳನ್ನು ಪ್ರಕಟಿಸಿದರಷ್ಟೇ ಸಾಲದು; ಆ ಸವಲತ್ತುಗಳು ಜನರಿಗೆ ತಲುಪುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಗಳೂ ಬೇಕು.

■ ರಘುನಾಥ ಚ.ಹ.

ನಿತ್ಯ ಕೋಟ್ಯಂತರ ಭಾರತೀಯರು ಹಸಿದ ಹೊಟ್ಟೆಯಲ್ಲಿ ಮಲಗುತ್ತಿದ್ದಾರೆ. ಶ್ರೀಲಂಕಾ, ಮ್ಯಾನ್ಮಾರ್‌ಗಳಿಗಿಂತಲೂ ನಾವು ಹೀನ ಸ್ಥಿತಿಯಲ್ಲಿದ್ದೇವೆ. ವಿಶ್ವದ ಮೂರನೇ ಆರ್ಥಿಕ ಶಕ್ತಿ ಎಂದು ಬೀಗುವ, ಅಭಿವೃದ್ಧಿ ಎನ್ನುವ ಮಂತ್ರ ಪಠಣವನ್ನು 'ಹಸಿವಿನ ಸೂಚ್ಯಂಕ' ಅಣಕಿಸುವಂತಿದೆ.

